ಸಮಾಜ ಕಲ್ಯಾಣ ಇಲಾಖೆಯನ್ನು ಬೇರ್ಪಡಿಸುವುದು

633(403) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಿಂದ ಸಮಾಜ ಕಲ್ಯಾಣ ಇಲಾಖೆಯನ್ನು ಬೇರ್ಪಡಿಸುವ ಪ್ರಸ್ತಾವನೆ ಸರ್ಕಾರದ ಗಮನದಲ್ಲಿದೆಯೇ;

ಆ) ಇಲಾಖೆಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಟಸ್ಥ ಧೋರಣೆ ಅನುಸರಿಸುತ್ತಿರುವುದರಿಂದ ಆರ್ಥಿಕವಾಗಿ ಹಿಂದುಳಿದಿರುವವರ ಬಗ್ಗೆ ಕಾಳಜಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಇಲ್ಲ

ಹಾಸನ ಜಿಲ್ಲೆಯಲ್ಲಿ ಗಣಿಗಾರಿಕೆ ಕುರಿತು

634(404) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಗಣಿಗಾರಿಕೆಗೆ ಎಷ್ಟು ಪರವಾನಗಿ ನೀಡಲಾಗಿದೆ. ತಾಲ್ಲೂಕುವಾರು ವಿವರ ನೀಡುವುದು

ಆ) ಅಕ್ರಮ ಸಾಗಾಣಿಕೆದಾರರಿಂದ ಎಷ್ಟು ದಂಡ ವಸೂಲಾಗಿದೆ?

ಶ್ರೀ ಎ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಹಾಸನ ಜಿಲ್ಲೆಯಲ್ಲಿ ಒಟ್ಟು 243 ಕಲ್ಲುಗಣಿ ಗುತ್ತಿಗೆಗಳ ಪರವಾನಗಿ ನೀಡಲಾಗಿದೆ. (ತಾಲ್ಲೂಕುವಾರು ವಿವರ ಅನುಬಂಧದಲ್ಲಿ ಲಗತ್ತಿಸಿದೆ.)

ಆ) ಅಕ್ರಮ ಗಣಿಗಾರಿಕೆಯಿಂದ 2001-02ರ ಸಾಲಿಗೆ ರೂ. 3,25,619-00 ಹಾಗೂ 2002-03ರ ಜೂನ್ ಅಂತ್ಯದ ವರೆಗೆ ರೂ. 44,505-00 ದಂಡ ವಸೂಲಿ ಮಾಡಲಾಗಿದೆ.

ಹಾಸನ ಜಿಲ್ಲೆಯ ಗಣಿ ಗುತ್ತಿಗೆ ಮತ್ತು ಕಲ್ಲು ಗಣಿ ಗುತ್ತಿಗೆಗಳ ತಾಲ್ಲೂಕುವಾರು ವಿವರ

	ಮುಖ್ಯ ಖನಿಜ				ಉಪ ಖನಿಜ					
ತಾಲ್ಲೂಕು	ಕ್ರೋಮೈಟ್	ಕಯೋಲಿನ್ (ಕ್ಲೆ)	ಬೆಣಚು ಕಲ್ಲು ಮತ್ತು ಸೋಪಸ್ಟೋನ್	ಒಟ್ಟು	ಅಲಂಕಾರಿಕ	ಕಟ್ಟಡ ಕಲ್ಲು	ಸಾಮಾನ್ಯ ಮರಳು	ಇಟ್ಟಿಗೆ ಮಣ್ಣೆ	ಸ್ಟಿಯೋಟೈಟ್	ಒಟ್ಟು
ಅರಸೀಕೆರೆ	1	2	3	6	-	10	-	-	1	11
ಆಲೂರು	-	-	-	-	-	13	3	-	-	16
ಅರಕಲಗೂಡು	-	-	-	-	12	22	2	1	-	37
ಬೇಲೂರು	-	-	1	1	4	33	6	-	-	43
ಚನ್ನರಾಯಪಟ್ಟಣ	6	-	-	6	1	25	-	4	-	30
ಹಾಸನ	-	-	-	-	8	15	5	-	-	28
ಹೊಳೆನರಸೀಪುರ	-	-	-	-	4	10	18	-	-	32
ಸಕಲೇಶಪುರ	-	-	-	-	5	9	32	-	-	46
ಒಟ್ಟು	7	2	4	13	34	137	66	5	1	243